**ಸಾಕ್ಷಿಯನ್ನು ದಿಃ _12/06/2025_ ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ಶ್ರೀ ಜೆಬಿಪಿ ವಕೀಲರಿಂದ ವಾದಿ ಪರವಾಗಿ.***

ವಾದಿಯು ಸಲ್ಲಿಸಿರುವ ದಾವೆ ಕುರಿತು ಮತ್ತು ನುಡಿ ಸಾಕ್ಷದ ಕುರಿತು ನನಗೆ ಸಂಪೂರ್ಣ ಮಾಹಿತಿ ಇದೆ. ನಾನು ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಪ್ರಮಾಣಪತ್ರದ 1 ನೇ ಖಂಡಿಕೆಯಲ್ಲಿ ಹೇಳಿರುವಂತೆ ದಿಃ25-06-2009 ರಲ್ಲಿ ಆಗಿರುವ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ರೀತಿ ಬರೆದುಕೊಟ್ಟಿದ್ದಾರೆ ಎಂದು ಹೇಳಲಾದ ಖರೀದಿ ಪತ್ರ ಎಷ್ಟು ಪ್ರತಿಫಲಕ್ಕೆ ಮತ್ತು ಸದರಿ ಖರೀದಿ ಪತ್ರದ ಆಸ್ತಿ ನಂಬರ ಮತ್ತು ಕ್ಷೇತ್ರ ಮತ್ತು ವಗೈರೆ ಮಾಹಿತಿ ನನ್ನ ಪತಿಗೆ ಗೊತ್ತು.

ಪ್ರತಿವಾದಿ ನಂ.2, 4 ರಿಂದ 6 ರವರು ಸಲ್ಲಿಸಿದ ಪ್ರತಿವಾದ ಪತ್ರದ ಕುರಿತು ನನಗೆ ಸಂಪೂರ್ಣ ಮಾಹಿತಿ ಇದೆ. ಸದರಿ ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದ 12 ನೇ ಖಂಡಿಕೆಯಲ್ಲಿ ಆರ್.ಎಸ್.ನಂ. 125 ಕ್ಷೇತ್ರ ಎರಡುವರೆ ಗುಂಟೆಗೆ ಮಾತ್ರ ರಾಜಿಯಾಗಿದೆ ಎಂದು ಬರೆದುಕೊಂಡಿರುವ ವಿಷಯ ಸಂಗತಿ ನಿಜವಿರುತ್ತದೆ.

ನಾನೇ ಹಾಜರುಪಡಿಸಿರುವ ನಿ.ಡಿ.16 ಮತ್ತು ನಿ.ಡಿ.27 ರಲ್ಲಿರುವ ಡ ಉತಾರದ ಪ್ರಕಾರ ಇರುವ ಆಸ್ತಿಯಾದ ಸರ್ವೇ ನಂಬರ 1 ಮತ್ತು ಸರ್ವೇ ನಂಬರ 125 ರ ಮಾಲೀಕರು ಪ್ರತಿವಾದಿ ನಂ.2 ರಿಂದ 6 ಎಂದರೆ ನಿಜ. ನಿ.ಡಿ.16 ರ ಪ್ರಕಾರ ಸದರಿ ಸರ್ವೇ ನಂಬರ 1 ಇದು 29 ಗುಂಟೆ ಶೇತ್ಕಿ ಜಮೀನು ಎಂದರೆ ನಿಜ. ಸದರಿ ಜಮೀನು ಪೋಡಿಯಾದ ನಂತರ ಸರ್ವೇ ನಂಬರ 1/1 ರಿಂದ 1/5 ರವರೆಗೆ ಆಗಿವೆ ಎಂದು ಸದರಿ ದಾಖಲಾತಿಯಲ್ಲಿ ದಾಖಲಿದ್ದು, ಅದನ್ನು ನಾನೇ ಹಾಜರುಪಡಿಸಿದ್ದೇನೆ ಎಂದರೆ ನಿಜ. ಈ ರೀತಿ ಇರುವ ½ ಸರ್ವೇ ನಂಬರ ಮಾಲೀಕರು ಪ್ರತಿವಾದಿ ನಂ.2 ರಿಂದ 6 ಎಂದರೆ ನಿಜ. ನಿ.ಡಿ.20 ರಿಂದ 22 ರವರೆಗೆ ತೀರ್ಪು ಮತ್ತು ಡಿಕ್ರಿಯ ದಾಖಲಾತಿಗಳನ್ನು ನಾವೇ ಹಾಜರುಪಡಿಸಿದ್ದು, ಸಪ್ತಾಪೂರ ಹದ್ದಿಯಲ್ಲಿರುವ ನಾಲ್ಕುವರೆ ಗುಂಟೆ ದಾವಾದಾಸ್ತಿ ಇರುತ್ತದೆ ಎಂದರೆ ನಿಜ. ಅದೇ ರೀತಿ ನಿ.ಡಿ.23 ಮತ್ತು 24 ರವರೆಗೆ ತೀರ್ಪು ಮತ್ತು ಡಿಕ್ರಿಯ ದಾಖಲಾತಿಗಳನ್ನು ನಾವೇ ಹಾಜರುಪಡಿಸಿದ್ದು, ಸಪ್ತಾಪೂರ ಹದ್ದಿಯಲ್ಲಿರುವ ನಾಲ್ಕುವರೆ ಗುಂಟೆ ದಾವಾದಾಸ್ತಿ ಇರುತ್ತದೆ ಎಂದರೆ ನಿಜ. ಸದರಿ ದಾವೆಗಳಲ್ಲಿ ನನ್ನ ಪತಿ

ಆರ್.ಎ.ನಂ.88/2019 ಹೂಡಿದ್ದು, ಅದರಲ್ಲಿ ಸಹ ದಾವಾ ಆಸ್ತಿ ಆರ್.ಎಸ್.ನಂ. 125 ಕ್ಷೇತ್ರ ನಾಲ್ಕುವರೆ ಗುಂಟೆ ಇರುತ್ತದೆ ಎಂದರೆ ನಿಜ. ಸದರಿ ಮೇಲ್ಮನವಿಯಲ್ಲಿ ನನ್ನ ಪತಿ ಎರಡುವರೆ ಗುಂಟೆಗೆ ಮಾತ್ರ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ನಿಜ.

ಪ್ರತಿವಾದಿಯರು ವಾದಿಗೆ ಸದರಿ ಜಮೀನಿನಿಂದ ಅಂದರೆ ಆರ್.ಎಸ್.ನಂ. 1/2 ರಲ್ಲಿ ಎರಡು ಗುಂಟೆ 10 ಅಣೆ ಜಾಗೆ ವಾದಿಗೆ ಖರೀದಿ ಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮೋಸ ಪೂರಿತವಾಗಿ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಮೋಸ ಮಾಡಿದವರು ಯಾರು ಎಂಬ ಪ್ರಶ್ನೆಗೆ ಸಾಕ್ಷಿದಾರರು ಒಬ್ಬ ಶ್ರೀಶೈಲ ಎನ್ನುವವರು ಎಂದು ಉತ್ತರಿಸುತ್ತಾರೆ. ಈ ರೀತಿ ಮೋಸ ಮಾಡಿರುವ ಕುರಿತು ಕ್ರಮ ಕೈಗೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಪತಿ ಜೀವಂತವಿರುವಾಗ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ಮೋಸ ಪೂರಿತವಾಗಿ ಖರೀದಿ ಮಾಡಿಕೊಂಡಿದ್ದಾರೆ ಎಂಬ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಡಿ.11 ರಂತೆ ಇರುವ ದಾಖಲಾತಿ ವಾದಿಯು ಖರೀದಿ ಜಮೀನನ್ನು ಅಳತೆ ಮಾಡಿಸಿರುವ ದಾಖಲಾತಿ ಎಂದರೆ ನಿಜ. ಈ ರೀತಿ ಅಳತೆ ಮಾಡುವ ಕಾಲದಲ್ಲಿ ಭೂಮಾಪಕರು ನಮಗೆ ನೋಟೀಸು ನೀಡಿರುವುದಿಲ್ಲ, ಶ್ರೀಶೈಲ ಇವರಿಗೆ ನೀಡಿರುತ್ತಾರೆ. ಸಾಮಾನ್ಯವಾಗಿ ಅಳತೆ ಮಾಡುವ ಕಾಲಕ್ಕೆ ಅಳತೆ ಆಸ್ತಿಯ ಅಕ್ಕಪಕ್ಕದ ಆಸ್ತಿಯ ಮಾಲೀಕರಿಗೆ ಮಾತ್ರ ನೋಟೀಸು ನೀಡುತ್ತಾರೆ ಎಂದರೆ ನಿಜ. ಸದರಿ ವಾದಿಯ ಜಮೀನಿಗೆ ಅಕ್ಕಪಕ್ಕದಲ್ಲಿ ನಾವು ರಾಜಿ ಮಾಡಿಕೊಂಡಿರುವ ಜಮೀನಿನ ಸರ್ವೇ ನಂಬರ 125 ಇರುವುದಿಲ್ಲ, ಆದ್ದರಿಂದ ನಮಗೆ ನೋಟೀಸು ಕೊಡುವ ಪ್ರಮಯವೇ ಬರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಮಾಡುವ ಕಾಲಕ್ಕೆ ನೀಡಿರುವ ನಿ.ಡಿ.18 ರ ವಿಷಯ ಸಂಗತಿಗಳು ನನಗೆ ಗೊತ್ತು. ಸದರಿ ನೋಟೀಸಿಗೆ ನಾನು ನೀಡಿರುವ ಪ್ರತ್ಯುತ್ತರ ನಿ.ಡಿ.19 ರಂತೆ ಇದ್ದು, ಅದರಲ್ಲಿರುವ ವಿಷಯ ಸಂಗತಿಗಳು ಸಹ ಗೊತ್ತು. ನಿ.ಡಿ.19 ರಲ್ಲಿ ಪ್ರತ್ಯುತ್ತರದಲ್ಲಿರುವ ವಿಪಯ ಸಂಗತಿಗಳು ನನ್ನ ಪ್ರತಿವಾದ ಪತ್ರ ಮತ್ತು ಸಾಕ್ಷ ಪ್ರಮಾಣಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ. ವಾದಿಯು ಖರೀದಿಸಿದ ಆಸ್ತಿಗೆ ಮತ್ತು ನಮಗೆ ಯಾವುದೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರಿಂದ 6 ಇವರು ನಾವು ರಾಜಿ

ಮಾಡಿಕೊಂಡಿರುವ ಆಸ್ತಿಯಾದ ಆರ್.ಎಸ್.ನಂ. 125 ರನ್ನು ಹೊರತುಪಡಿಸಿ, ಅವರ ಮಾಲ್ಕೀಗೆ ಸಂಬಂಧಿಸಿದ ಬೇರೆ ಆಸ್ತಿಗಳನ್ನು ಯಾವುದೇ ರೀತಿ ಪತ್ರದ ಮುಖಾಂತರ ನಮಗೆ ಬರೆದುಕೊಟ್ಟಿಲ್ಲ.

ದಿಃ03-10-2022 ರಂದು ಅಂದರೆ ದಾವಾ ಹೂಡಿದ ನಂತರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಜಾಹಿರಾತಿಗೆ ನಾವೇ ಮಾಹಿತಿ ನೀಡಿರುತ್ತೇವೆ. ಸದರಿ ಜಾಹಿರಾತು ಯಾವುದೇ ದಾಖಲಾತಿಗಳ ಆಧಾರವಿಲ್ಲದೇ ಕೊಟ್ಟಿರುವ ಸುಳ್ಳು ಜಾಹಿರಾತು ಎಂದರೆ ಸರಿಯಲ್ಲ. ಸರ್ವೇ ನಂಬರ 1/1 ಇದಕ್ಕೆ ಶ್ರೀಶೈಲರವರು ಮಾಲೀಕರು ಇರುತ್ತಾರೆ. ಜಾಹಿರಾತಿನ ಕುರಿತು ನನ್ನ ಪ್ರತಿವಾದ ಪತ್ರದಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ.

ಭೂಮಾಪಕರು ನೀಡಿರುವ ವರದಿಯ ನಂತರ ವಾದಿಯು ನಮಗೆ ನಿ.ಡಿ.12 ರಂತೆ ಇರುವ ನೋಟೀಸು ನೀಡಿದ್ದು, ಸದರಿ ನೋಟೀಸಿಗೆ ನಾವು ನಿ.ಡಿ.13 ರಂತೆ ಪ್ರತ್ಯೂತ್ತರ ಸಹ ನೀಡಿರುತ್ತೇವೆ ಎಂದರೆ ನಿಜ. ಸದರಿ ಪ್ರತ್ಯೂತ್ತರದಲ್ಲಿ ನೋಟೀಸಿನ ಮುಖಾಂತರ ಕೇಳಿದ ಜಾಗೆಯನ್ನು ಬಿಟ್ಟುಕೊಡಲು ಬರುವುದಿಲ್ಲ ಎಂದು ಬರೆದಿದ್ದು ಇರುತ್ತದೆ ಎಂದರೆ ನಿಜ.

ನಿ.ಡಿ.1 ನನ್ನ ಮಾವನಾದ ಶಿವಪ್ಪ ಬಡಿಗೇರ ಇವರಿಗೆ ಸಂಬಂಧಪಟ್ಟ ಆಸ್ತಿಯ ತೆರಿಗೆಯ ರಶೀದಿ ಎಂದರೆ ನಿಜ. ನಿ.ಡಿ.2 ರಂತೆ ಇರುವ ದಾಖಲೆ ಸಹ ಆಸ್ತಿ ತೆರಿಗೆ ರಶೀದಿ ಇದ್ದು, ಅದನ್ನು ದಾವಾ ಹೂಡಿದ ನಂತರ ಅಂದರೆ 2023-24 ನೇ ಸಾಲಿನದು ಇದ್ದು, ಸದರಿ ತೆರಿಗೆ ರಾಜಿ ಸಂಧಾನದಲ್ಲಿ ಮಾಡಿಕೊಂಡಿರುವ ರಾಜಿ ಡಿಕ್ರಿಯ ಪ್ರಕಾರ ಬಂದಿರುವ ಆಸ್ತಿಯ ಕುರಿತು ಇರುತ್ತದೆ ಎಂದರೆ ನಿಜ. ನಿ.ಡಿ.1 ರಿಂದ 7 ದಾಖಲಾತಿಗಳು ಸದರಿ ದಾವೆಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ದಾವಾದಾಸ್ತಿಯಲ್ಲಿ ನಾವುಗಳು 2020 ನೇ ಇಸ್ವಿಯಲ್ಲಿ ಅಂದರೆ ಕೋವಿಡ ಮಹಾಮಾರಿ ಇರುವಾಗ ಅಂದರೆ ವಾದಿ ಖರೀದಿಸಿದ 2 ಗುಂಟೆ 10 ಆಣೆ ಜಾಗೆಯಲ್ಲಿ ಪಶ್ಚಿಮ ದಿಕ್ಕಿಗೆ 1 ಗುಂಟೆ ಜಾಗೆಯನ್ನು ಅತಿಕ್ರಮಿಸಿ ಶೆಡ್ ನಿರ್ಮಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಖರೀದಿಸಿದ ಆಸ್ತಿಯಲ್ಲಿ ನಮಗೆ ಯಾವುದೇ ರೀತಿ ಹಕ್ಕು ವ ಹಿತಾಸಕ್ತಿ ಇರದೇಯಿದ್ದರೂ ಸಹ ಅವರ ಅನುಪಸ್ಥಿತಿಯನ್ನು ದುರುಪಯೋಗ

ಮಾಡಿಕೊಂಡು ಅತಿಕ್ರಮಣ ಮಾಡಿ ಶೆಡ್ ನಿರ್ಮಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಗೆ ದಾವಾ ಹೂಡುವ ಕಾರಣ ಉಂಟಾಯಿತು ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.